**ಅ.ದಾವಾ ನಂ.341 /13** **ಡಿ.ಡಬ್ಲ್ಯೂ-1**

**ದಿನಾಂಕ 09/03/2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ** **ಶ್ರೀ ಆರ್.ಡಿ.ಆರ್ ವಕೀಲರಿಂದ**

ನಾನು ಖರೀದಿಸಿದ್ದ ಜಮೀನಿನ ಮೂಲ ಸರ್ವೆ ನಂಬರ್ 8/1 ಆಗಿತ್ತು. ಅದು ಒಟ್ಟು 9 ಗುಂಟೆ ಜಮೀನು ಆಗಿದ್ದು ಆ ಪೈಕಿ 2 ಗುಂಟೆ ನಾನು ಖರೀದಿಸಿದ್ದೇನೆ. ಸದರಿ ಸರ್ವೆನಂಬರ್ ನಾನು ಖರೀದಿಸಿದ ನಂತರ 8/39 ಎಂದು ದುರಸ್ತ ಆಗಿದೆ. ನನ್ನ ಅರ್ಜಿಯ ಮೇರೆಗೆ ದುರಸ್ತ ಆಗಿದೆ. ದುರಸ್ತ ಮಾಡುವ ಮೊದಲು ಸರ್ವೆ ಕಚೇರಿಯವರು ಬಾಜುದಾರರಿಗೆ ತಿಳುವಳಿಕೆ ಪತ್ರ ನೀಡಿದ್ದರು. ಸದರಿ ಪತ್ರದ ನಕಲು ನನ್ನ ಹತ್ತಿರ ಇಲ್ಲ ದುರಸ್ತ ಮಾಡಿಸಿದ ದಾಖಲಾತಿ ನನ್ನ ಹತ್ತಿರ ಇದೆ. ಸದರಿ ದಾಖಲಾತಿಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿ.ಪಿ 6 ರಲ್ಲಿರುವ ಕ್ರಯ ಪತ್ರವನ್ನು ತೋರಿಸಿ ಅದರಲ್ಲಿ ತಾವು ಖರೀದಿಸಿದ ಜಮೀನಿನ ಪೂರ್ವಕ್ಕೆ ಹೆಚ್.ಕೆ ಕೃಷ್ಣ ವಗೈರೆ ಇವರ ಜಮೀನು, ಪಶ್ಚಿಮಕ್ಕೆ ತಿಮ್ಮಯ್ಯನ ಮಗ ದಾಸಯ್ಯನ ಜಮೀನು, ಉತ್ತರಕ್ಕೇ ಹೌಸಿಂಗ್ ಬೋರ್ಡ್ ಜಾಗ, ಹಾಗೂ ದಕ್ಷಿಕ್ಕೆ ಹೆಚ್.ಕೆ ನಾರಾಯಣರವರ ಜಮೀನು ಎಂದು ನಮುದಿಸಿದೆ ಎಂದರೆ ಸರಿ . ಸಾಕ್ಷಿ ಮುಂದುವರಿದು ಈಗ ಸದರಿ ಚೆಕ್ಕುಬಂದಿ ಆ ರೀತಿ ಇಲ್ಲ ಎಂದು ನುಡಿಯುತ್ತಾರೆ. ಈಗ ನಮ್ಮ ಜಮೀನಿನ ಪುರ್ವಾಕ್ಕೆ ರಾಜೇಗೌಡ ರವರ ನಿವೇಶನ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ

**ಮರು ವಿಚಾರಣೆಃ ಇಲ್ಲ**

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.